**ಅಸಲು ದಾವಾ ನಂಃ 70/2015**
**ಪಿ.ಡಬ್ಲ್ಯೂಃ 1 ,**

**<u>ದಿನಾಂಕ :13-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟಿ ಸವಾಲು :- ಶ್ರೀ.ಎಸ್.ಎ. ಕೆ ಪ್ರತಿವಾದಿ ಪರ ವಕೀಲರಿಂದ :</u>**

ನಿಪಿ-29 ದಾಖಲೆ ಆ ಆಸ್ತಿಯ ಪ್ಲಾಟ ನಂ: 212, 211 ಹೈದ್ರಾಬಾದ ರಿಂಗರೋಡ ರಾಯಚೂರ, ಅದರ ಅಳತೆ ಗೊತ್ತಿಲ್ಲಾ, ಅದರ ಪ್ರತಿಫಲ ಗೊತ್ತಿಲ್ಲಾ. ಸದರಿ ನಿಪಿ-29 ರಲ್ಲಿ ರುವ ಆಸ್ತಿ ರಾಜಿ ಡಿಕ್ರಿಯಲ್ಲಿ ಯಾರಿಗೆ ಹೋಗಿದೆ ಎಂದು ಗೊತ್ತಿಲ್ಲಾ. ನಿಪಿ-30 ಸ.ನ. 541/6 ಚಿತ್ತಾಪೂರದಲ್ಲಿದೆ ಕ್ಷೇತ್ರ 4 ಎಕರೆ ಚಿಲ್ಲರೆ ಗುಂಟೆ ಇದೆ. ಅದರ ಪ್ರತಿಫಲ ರೂ. 15 ಲಕ್ಷ ಮತ್ತು 1 ಲಕ್ಷ 65 ಸಾವಿರ ಬಡ್ಡಿ ಸೇರಿ ಖರಿದಿ ಕರಾರು ಪತ್ರ ಆಗಿದೆ. ದಸ್ತಾವೇಜ ಸಂಖ್ಯೆ ಗೊತ್ತಿಲ್ಲಾ. ನಿಪಿ-30 ಕ್ರಯ ಪತ್ರ ಆದ ಬಗ್ಗೆ ಗೊತ್ತಿಲ್ಲಾ. ನಿಪಿ-30 ರದ್ದಾಗಿದೆಯೋ ಅಥವಾ ಕ್ರಯ ಪತ್ರ ಆಗಿದೆಯೋ ಯಾವುದೇ ದಾಖಲೆ ಸಲ್ಲಿಸಿಲ್ಲಾ. ನಿಪಿ-31 ಕ್ರಯ ಪತ್ರ. ಸಾಕ್ಷಿ ಮುಂದುವರೆದು ಅದು ದಾನ ಪತ್ರ ಅಂತಾ ನುಡಿಯುತ್ತಾರೆ. ಸ.ನ. 541 /6 ರ ದಾನ ಪತ್ರ. ಶರಣಮ್ಮ ಮತ್ತು ಪ್ರೇಮ ನಡುವೆ ಆದ ದಾನ ಪತ್ರ ಅವರನ್ನು ಈ ದಾವೆಗೆ ಪಕ್ಷಗಾರರನ್ನಾಗಿ ಮಾಡಿಲ್ಲಾ.

ನಿಪಿ-32 ಸ.ನ. 541/3 ಚಿತ್ತಾಪೂರ ಕೆ ಇದ್ದು ಅದರ ಕ್ಷೇತ್ರ 2 ಎಕರೆ. ಶ್ಯಾಮಲಾ ಮತ್ತು ಶಿವನರೆಡ್ಡಿಯ ನಡುವೆ ಆದ ದಾನ ಪತ್ರ. ಶಿವನರಡ್ಡಿಯನ್ನು ಈ ದಾವೆಯಲ್ಲಿ ಪಕ್ಷಗಾರರಾನ್ನಾಗಿ ಮಾಡಿಲ್ಲಾ, ಅವರಿಬ್ಬರು ಅಕ್ಕ ತಮ್ಮ. ಶಿವನರೆಡ್ಡಿ ತನ್ನ ಅಕ್ಕಳಿಗೆ ದಾನ ಪತ್ರ ಬರೆದುಕೊಟ್ಟಿದ್ದಾನೆ ಎಂದರೆ ಸರಿ. ಸ.ನ. 156/1 ನಿಪಿ-34 ಶ್ಯಾಮಲಾ ಇವರ ಖರಿದಿಸಿದ ಆಸ್ತಿ ಎಂದರೆ ಸರಿ. ಸ.ನ. 156/2 ನಿಪಿ-33 ಪ್ರಕಾರ ಮಂಜುನಾಥ ಇವರ ಖರಿದಿಸಿದ್ದಾರೆ

ಎಂದರೆ ಸರಿ. ನಿಪಿ-35 ಯಾರ ಮಧ್ಯ ಆಗಿದೆ ಎಂದು ಗೊತ್ತಿಲ್ಲಾ. ನಿಪಿ-35 ಸರ್ವೆ ನಂಬರ. 156/1 ರ ದಾಖಲೆ.  ನಿಪಿ-36 ಹಕ್ಕು ಬದಲಾವಣೆ ಶಿವಶರಣಪ್ಪ ಇವರಿಂದ ಶ್ಯಾಮಲಾ ಇವರು ಖರಿದಿಸಿದ ಆಸ್ತಿ ಎಂದರೆ ಸರಿ. ನಿಪಿ-37 ಖರಿದಿ ಪತ್ರ ಚಿತ್ತಾಪೂರ ಸನ. 156/1  ರ ದಾಖಲೆ. ಶಿವಶರಣಪ್ಪ ರಿಂದ 2ನೇ ಪ್ರತಿವಾದಿ ಖರಿದಿಸಿದ ಆಸ್ತಿ ಆಗಿರುತ್ತದೆ. ನಿಪಿ-38 ಸ.ನ. 10/2 ರಾಜಿ ಡಿಕ್ರಿ ಪ್ರಕಾರ 2ನೇ ಪ್ರತಿವಾದಿ ಹೆಸರಿಗೆ ಆಗಿರುತ್ತದೆ ಎಂದರೆ ಗೊತ್ತಿಲ್ಲಾ.

**( ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಹೆಚ್ಚಿನ ಪಾಟಿ ಸವಾಲಿಗಾಗಿ ಕಾಲವಕಾಶ ಕೇಳಿದ್ದರಿಂದ ಪಾಟಿ ಸವಾಲು ಮುಂದೂಡಲಾಯಿತು. )**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**